ಶ್ರೀ ಎಂ. ವೈ. ಪಾಟೀಲ್ — (ಈ) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಸಚಿವರು 'ಗಾಣಗಾಪುರದಲ್ಲಿ ದತ್ತವನವೆಂದು ಕರೆಯಲ್ಪಡುವ ತೋಟವನ್ನು ಅಭಿವೃದ್ಧಿಪಡಿಸಿಲ್ಲ ಈ ಇಲಾಖೆಗೆ ಯಾವುದೇ ಜಮೀನನ್ನು ವಹಿಸಿಕೊಟ್ಟಿಲ್ಲ'' ಎಂದು ಹೇಳಿದ್ದಾರೆ. ಅಲ್ಲಿ ಜಮೀನನ್ನು ಕೊಡಲು ಕೆಲವರು ತಯಾರಿದ್ದಾರೆ. ಸರ್ಕಾರ ಅಲ್ಲಿ ತೋಟವನ್ನು ಅಭಿವೃದ್ಧಿಪಡಿಸುವುದೆ ?

ಶ್ರೀ ಕೆ. ಯಂಕಟಪ್ಪ. — ಈ ಪ್ರಶ್ನೆ ಬಂದಾಗ ಸಂಬಂಧಪಟ್ಟ ತಹಶೀಲ್ದಾರರಿಂದ ನಾನು ಮಾಹಿತಿ ಯನ್ನು ತರಿಸಿದ್ದೇನೆ. ಅಲ್ಲಿ ಸರ್ಕಾರಿ ಭೂಮಿ ಯಾವುದೂ ಇಲ್ಲ. ಆದರೆ, ಖಾಸಗಿಯವರು ಭೂಮಿ ಯನ್ನು ವಹಿಸಿಕೊಡಲಿಕ್ಕೆ ತಯಾರಿದ್ದರೆ ಮತ್ತು ಅಂತಹ ಭೂಮಿ ಉತ್ತಮ ಪ್ರದೇಶವಾಗಿದ್ದರೆ, ಆ ಬಗ್ಗೆ ಪ್ರಯತ್ನ ಮಾಡಲಾಗುವುದು.

Subsidy given for Construction of Kalyana Mantaps in the State.

290 SRI M. Y. PATIL (Afzalpur).— Will the Minister of State for Marketing and Muzrai be pleased to state.—

(a) the subsidy given by the Government for the Construction of the Kalyana Mantapas in the State during the last year and the total amount (District wise details may be furnished) ;

(b) of which, the amount sanctioned to Gulbarga District ;

(c) the reasons for not granting subsidy to the Kalyan Mantapas of Phattarga and Chinnamalla Temples of Afzalpur Taluk ;

(d) whether Government intend to grant subsidy during this year at least ?

SRI SUDHENDRA KASABHE (Minister of State for Marketing and Muzrai).—

(a) The district wise details of the financial assistance given for construction of Kalyanamantapas during the year 1979 are as follows:

1	Dharwar	...	2,25,000
2	Bidar	...	1,00,000
3	Bijapur	...	1,00,000
4	North Kanara	...	1,60,000
5	Mandya	...	50,540
6	Chitradurga	...	1,60,000
7	Kolar	...	1,41,000

(b) No.

(c) As the requests for providing financial assistance to the Kalyanamantapas of the temples of Pattaraga and Chinnamalla were received very late it had not been possible to grant the subsidy during the last year.

(d) In the year 1980-1981, these requests will be considered and suitable action will be taken.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನನ್ನ (೫) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಸಚಿವರು "ಘತ್ತರಗಾ ಹಾಗೂ ಚಿನ್ನಮಳ್ಳಿ ದೇವಸ್ಥಾನಗಳ ಕಲ್ಯಾಣ ಮಂಟಪಗಳಿಗೆ ಹಣ ಒದಗಿಸ ಬೇಕೆಂಬ ಕೋರಿಕೆಗಳು ಬಹಳ ತಡವಾಗಿ ಬಂದಿರುವುದರಿಂದ ಕಳೆದ ವರ್ಷದಲ್ಲಿ ಹಣ ಒದಗಿಸಲು ಸಾಧ್ಯ ವಾಗಿಲ್ಲ" ಎಂದು ಹೇಳಿದ್ದಾರೆ. ಕರ್ನಾಟಕ ಭೂಪಟದಲ್ಲಿ ಕಲ್ಬುರ್ಗಿ ಎನ್ನುವ ಒಂದು ಜಿಲ್ಲೆ ಇರುವು ದೆಂದು ಮಾನ್ಯ ಸಚಿವರಿಗೆ ತಿಳಿದಿದೆಯೋ ಏನೋ ! ಕಲ್ಯಾಣ ಮಂಟಪಗಳಿಗೆ ಹಣ ಒದಗಿಸಬೇಕೆಂಬ ಕೋರಿಕೆ ಕಲ್ಬುರ್ಗಿ ಜಿಲ್ಲೆಯಿಂದ ಸರಕಾಲಕ್ಕೆ ಬಂದಿರಲಿಲ್ಲವೇ?

ಶ್ರೀ ಸುಧೀಂದ್ರರಾವ್ ಕಸಬೆ.—ಗುಲ್ಬರ್ಗ ಜಿಲ್ಲೆಯ ಯಾವುದೇ ಅರ್ಜಿಗಳು ಸರಕಾಲಕ್ಕೆ ಬಂದಿಲ್ಲದೆ ಇರುವುದರಿಂದ, ಆ ಜಿಲ್ಲೆಗೆ ಹಣ ಸಹಾಯವನ್ನು ಮಾಡಿಲ್ಲ.

ಶ್ರೀ ಎಂ. ವೈ ಪಾಟೀಲ್.—ಬೇರೆ ಜಿಲ್ಲೆಗಳಿಗೆ ಹಣ ಒದಗಿಸಿದ ಆಥವಾ ಮಂಜೂರು ಮಾಡಿದ ದಿನಾಂಕ ಯಾವುದು? ಮತ್ತು ಆ ದಿನಾಂಕದೊಳಗೆ ಕಲ್ಬುರ್ಗಿ ಜಿಲ್ಲೆಯಿಂದ ಕೋರಿಕೆ ಬಂದಿರಲಿಲ್ಲವೇ? ಏಕೆಂದರೆ, ನಾವು ಸರಕಾಲದಲ್ಲಿ ಕೋರಿಕೆಯನ್ನು ಸಲ್ಲಿಸಿದ್ದೆವು.

ಶ್ರೀ ಸುಧೇಂದ್ರರಾವ್ ಕಸಬೆ.—ಹಾಗಿದ್ದರೆ, ನಿಮ್ಮ ವಿಚಾರಗಳನ್ನು ನನ್ನ ಗಮನಕ್ಕೆ ತನ್ನಿ, ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

Management of Chamundeshwari Temple at Mysore

211 SRI H. GANGADHARAN (Krishnaraja).—Will the Minister of State for Marketing and Muzrai be pleased to state.—

(a) whether the Government has taken the management of Sri Chamundeshwari Temple from the Palace, Mysore?

if so, what are the terms and conditions ?

SRI SUDHENDRA KASABE (Minister of State for Marketing and Muzrai).—

(a) Yes.

The terms and conditions subject to which Sri Chamundeshwari Temple has been taken over are as under :

(i) The cost of Establishment of one Sheristedar, two Clerks and two peons, is to be met by Government and the institution should contribute to the Establishment Fund at the rate as other major institutions contributes (namely at 8%).

(ii) Government reserve the right of reviewing from time to time the tasdik allowance grant to the institution. The palace will, however, continue to manage the institution as at present as Provided for in the Muzrai Manual.

(iii) The earlier decision that these decisions are recognised as private property of His Highness the Maharaja of Mysore should be deemed to have been modified.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಳ್ಳ ಬೇಕೆಂದು ಪ್ರಾರ್ಥನೆ.